ತಾರೀಖು 14ನೇ ಮೇ 1887.

ಕ್ಯಾಂಪ್ ನಂ. 483.—1885ನೇ ಇಸವಿ ಫಿಬ್ರವರೀ 27ನೇ ಮತ್ತು ಂ 221ನೇ ನಂಬರುಳ್ಳ ಇಸ್ತಿಹಾರ್‌ನಾಮೆಯಲ್ಲಿ ಘಾಯಿಷ್ ಮಾಡಲ್ಪಟ್ಟ 1ನೇ ನಂಬರ್ ರೂಲ್ಸ್ ಕುರಿತ ಗಾಂಜಾ ಸಾಗುವಳೀದಾರರ ಲೈಸೆನ್ಸುಗಳನ್ನೆ ಪಟ್ಟೆಯ ಇದರಡೀಕಂಡ ನಮೂನೆಯು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತೆ:—

ಗಾಂಜಾ ರೂಲ್‌ಶಿಗೆ ಸಂಬಂಧಪಟ್ಟ ಅರ್ಪೆಂಡಿಕ್ಸ್ A.

ಗಾಂಜಾ ಸಾಗುವಳಿದಾರನ ಲೈಸೆನ್ಸಯಾನೆ ಪಟ್ಟೆ.

————ಡಿಸ್ಟ್ರಿಕ್ಟ್————————ತಾಲ್ಲೂಕು ಅಮಲ್ದಾರರಿಂದ————————

1885ನೇ ಇಸವಿ ಫಿಬ್ರವರೀ 27ನೇ ಮತ್ತು ಂ 229ನೇ ನಂಬರುಳ್ಳ ದಿರ್ವಾಣರ ಇಸ್ತಿಹಾರ್‌ನಾಮೆಯೊಡನೆ ಘಾಯಿಷ್ ಮಾಡಲ್ಪಟ್ಟ Iನೇ ನಂಬರ್ ರೂಲ್ಸ್ ಅನುಸರಿಸಿ ಯಿದರದೆಶೀಯಿಂದ————————ತಾಲ್ಲೂಕಿನ————————ಗ್ರಾಮದಲ್ಲಿರುವ——ಗೆ ಲೈಸೆನ್ಸ್ ಕೊಡಲ್ಪಟ್ಟಿರುತ್ತೆ, ಮತ್ತು ಸದರೀ——————ನ ಹಿಡುವಳಿಯಲ್ಲಿರು——ಯಕರೆ————ಗುಂಟೆ ವಿಸ್ತೀರ್ಣ ಉಳ್ಳ————ರೂಪಾಯಿ ಆಕಾರವುಳ್ಳ——ನೇ ನಂಬರ್ ಜಮೀನಿನಲ್ಲಿ ಭಂಗೀಗಿಡ ಸಾಗುವಳೀಮಾಡಿ ಗಾಂಜಾ ಯಂಬ ನಿಷಾ ವಸ್ತುವನ್ನ ಇದರಡೀಕಂಡ ಷರತ್ತುಗಳ ಮೇಲೆ ಉತ್ಪತ್ತಿ ಮಾಡುವ ಬಗ್ಗೆ ಇದರಿಂದ ಅಧಿಕಾರ ಕೊಡಲ್ಪಟ್ಟಿರುತ್ತೆ.

I. ತಯಾರ್ಮಾಡಲ್ಪಟ್ಟ ಗಾಂಜಾವಿನ ತೇದಾದು ಗ್ರಾಮದ ಪಟೇಲ ಮತ್ತು ಶ್ಯಾನುಭೋಗರಿಗೆ ತಿಳಿಸಲ್ಪಟ್ಟು ಅವರ ಸಮಕ್ಷಮ ಅದು ವಜನಿ ಮಾಡಲ್ಪಟ್ಟು ಮತ್ತು ಅದರ ವಿಲೇವಾರಿಯು ಕರಾರ್‌ವಾಕಾ ಆಗಿಯೂ ಕ್ರಮವಾಗಿಯೂ ತೋರಿಸಲ್ಪಡತಕ್ಕದ್ದು.

II. ತಯಾರ್ಮಾಡಲ್ಪಟ್ಟ ಗಾಂಜಾ, ಸಾಧಾರಣವಾಗಿ ಮುಂತಿಂಗಳ ವಳಗಾಗಿಯಾಗಲೀ ಅಥವಾ ಡೆಪ್ಯುಟಿ ಕಮ್ಮಿಷನರವರಿಂದ ಮುಂದಾಗಿ ಅಪ್ಪಣೆ ಪಡೆದು ಅದು ತಯಾರ್ಮಾಡಲ್ಪಟ್ಟ ಮೂರು ತಿಂಗಳ ವಳಗಾಗಿಯಾಗಲೀ ಗವರ್ನಮೆಂಟ್ ತರಫ ಕಂಟ್ರಾಕ್ಟುದಾರನಿಗೆ ನ್ಯಾಯವಾದ ಮೌಲ್ಯಕ್ಕೆ ವಿಕ್ರಯಿಸಲ್ಪಡತಕ್ಕದ್ದು, ಯಾ D ಫಾರಂ ಪ್ರಕಾರ ಲೈಸೆನ್ಸ್ ಅನುಸರಿಸಿ ರಫ್ತು ಮಾಡಲ್ಪಡತಕ್ಕದ್ದು. ಇದಕ್ಕೆ ತಪ್ಪಿದರೆ ಗಾಂಜಾ ಜಫ್ತು ಮಾಡಲ್ಪಟ್ಟು ಸರಕಾರದಿಂದ ವಿಕ್ರಯಿಸಲ್ಪಡುವದು.

III. ಲೈಸೆನ್ಸುದಾರನು, ಅವನಿಗೆ ಅಪೇಕ್ಷೆಯಿದ್ದರೆ, ಅವನ ಸ್ವಂತಖರ್ಚಿನ ಬಗ್ಗೆ ಅಮಲ್ದಾರರಿಂದ ಕೊಡಲ್ಪಡುವ ಪ್ಯೂಸಿನ ಆಧಾರದ ಮೇಲೆ ಮತ್ತು ಭಂಗಿ ಸಾಗುವಳೀ ಮಾಡಲ್ಪಟ್ಟ ಜಮೀನು ವಂದು ಯಕರೆಗಿಂತ ಕಮ್ಮಿ ಯಿಲ್ಲದ ಪಕ್ಷದಲ್ಲಿ 14 ಪೌಂಡ್‌ಗಳಿಗಿಂತ ಜಾಸ್ತಿ ಅಲ್ಲದ ಗಾಂಜಾವನ್ನ ಉಳಸಿಕೊಳ್ಳಬಹುದು. ಹಾಗಿಲ್ಲದ ಪಕ್ಷದಲ್ಲಿ ಸ್ವಂತ ಖರ್ಚಿನ ಬಗ್ಗೆ ಅವಕಾಶ ಕೊಡಲ್ಪಡಲಾರದು. ಲೈಸೆನ್ಸುದಾರನು ಈ ರೂಲ್ಸ್ ಅನುಸರಿಸಿ ತನ್ನ ಸ್ವಂತ ಉಪಯೋಗದ ಬಗ್ಯಾಗಿ ಉಳಸಿಕೊಂಡ ಗಾಂಜಾವನ್ನ ವಿಕ್ರಯಿಸಕೂಡದು ಯಾ ಅನ್ಯಥಾ ವಿಲೇ ಮಾಡಕೂಡದು.

IV. ಈ ಲೈಸೆನ್ಸಯಾನೆ ಪಟ್ಟೆಯು ವಂದು ವರುಷಕ್ಕೆ ಅಂದರೆ————ಲಾಗಾಯತು————ವರಿಗೆ ಜಾರೀಯಲ್ಲಿರತಕ್ಕದ್ದು, ಮತ್ತು ಯಿದರಲ್ಲಿಯಾಗಲೀ ಯಕ್ಸೈಸ್ ಆಕ್ಟಿನಲ್ಲಾಗಲೀ ಯಾ ಅದನ್ನನುಸರಿಸಿ ಮಾಡಲ್ಪಟ್ಟ ರೂಲ್ಸ್‌ನಲ್ಲಾಗಲಿ ಅಡಗಿ ಯಿರತಕ್ಕ ಯಾವ ಷರತ್ತುಗಳನ್ನಾದರೂ ಉಲ್ಲಂಘಿಸಿದರೆ ಲೈಸೆನ್ಸುದಾರನು ಸದರೀ ಯಕ್ಸೈಸ್ ಆಕ್ಟಿನಲ್ಲಿ ವಿಧಿಸೋಣಾದ ದಂಡನೆಗಳಿಗೆ ಗುರಿಯಾಗತಕ್ಕದ್ದಲ್ಲದೆ ಸಂಬಂಧಪಟ್ಟ ತಮಾಂ ನಿಷಾ ಪದಾರ್ಥವೂ ಜಫ್ತು ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

V. ಈ ಲೈಸೆನ್ಸಯಾನೆ ಪಟ್ಟೆಯು, ಮೇಲೆಕಂಡ ಕಾಲಮಿನಲ್ಲಿ ಕಂಡ ವಾಯಿದೆಯು ಮುಗಿದ ತರುವಾಯ ತಾಲ್ಲೂಕು ಅಮಲ್ದಾರರಿಗೆ ವಾಪಸ್ ಮಾಡಲ್ಪಡತಕ್ಕದ್ದು, ಮತ್ತು ಸದರೀ ಆಫೀಸರರು ತಯಾರ್ ಮಾಡಲ್ಪಟ್ಟ ಗಾಂಜಾ ಹ್ಯಾಂಗೆ ವಿಲೇವಾರಿ ಮಾಡಲ್ಪಟ್ಟಿತೆಂಬ ವಿಷಯ ಅದರಮೇಲೆ ಪದಾ ಮಾಡತಕ್ಕದ್ದು. ಲೈಸೆನ್ಸುದಾರನು ಮೇಲ್ಕಂಡಂತೆ ಲೈಸೆನ್ಸನ್ನ ವಾಪಸ್ ಮಾಡದಿದ್ದರೆ ಆತನು ಯಕ್ಸೈಸ್ ಆಕ್ಟು ಅನುಸರಿ ಫಿರ್ಯಾದ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

188—ನೇ ಇಸವಿ————ಮಾಹೆ————ತಾರೀಖಿನಲ್ಲಿ ನಮ್ಮ ಸೈನ್ ಮೆನುವಲ್‌ನಿಶಿ ಕೊಡಲ್ಪಟ್ಟಿರುತ್ತೆ.

ಅಮಲ್ದಾರ್

ಮೊಹರ್.

——ತಾಲ್ಲೂಕು.

ತಾರೀಖು 14ನೇ ಮೇ 1887.

ನಂ. 16.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾನಕ್ಕೊತ್ತರ ಕ್ರಮ ಪ್ರಕಾರ ಜಫ್ತು ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗಾಮುವು ಇದರಡೀ ಕಂಡ ತಖ್ತೆಯಲ್ಲಿ ಸಮೂದಿ ವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ

ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟೆ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜವಿನಾನುಗಳು ಆವ್ವೆಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರೆ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತೆಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ. ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟೆ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟುಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿರ್ವಾರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ತಿಪ್ಪಸಂದ್ರ.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
ಕಜೂರು.	ಕಡೂರು.	ಸಖ್ತಿರೇವಪ್ಪಟಿ	ಲಿಂಗದಹಳ್ಳಿ	ಶ್ಯಾಮಾವಧಾನಿ ವಗೈರೇ 9 ಜನ	ಖಂ. ಕೂ. ಪ. 2,988 0 0	ರೂ. ಆ. ಪೈ. 1,347 0 0	ರೂ. ಆ. ಪೈ. 560 3 0	ರೂ. ಆ. ಪೈ. 281—3—7 ಮತ್ತು ಹರಾಜ್ ತಾರೀಖು ವರಿಗಿನ ಬಡ್ಡೀ.	ಮುಂದಿನ ತಿಂಗಳು ತಾರೀಖು 22ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಸಿಸ್ಟೆಂಟ್ ಕಮ್ಮಿಷನರ್ ಯಾ ಅಮಲ್‌ದಾರ್ರು ರೂಬರು.

ತಾರೀಖು 10ನೇ ಮೇ 1887.

ಕ್ಯಾಂಪ್ ನಂ. 374.—ಜೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ ಯ್ಯ. ವೆಂಕಟರಾಯರಿಗೆ, ಮಾಹೆ ಮಜಕೂರು 5ನೇ ಮರ್ಕುಂ ಲಾಗಾಯಿತು ಯಾ ಅನರು ಉಪಯೋಗಿಸಿಕೊಂಡ ತಾರೀಖು ಮೊದಲು ಮೂರುವಾರಗಳ ಬಗೆರೆ ತಲಬ ರಜಾ ಕೊಡಲ್ಪಟ್ಟಿರುತ್ತೆ.

ಅಮಲ್ದಾರ್ ವೆಂಕಟರಾಯರ ರಜಾ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಸದರೀ ತಾಲ್ಲೂಕು ಶಿರಸ್ತೇದಾರ್ರು ಡಿಟೋ ತಾಲ್ಲೂಕು ಚಾರ್ಜು ವಹಿಸಿರತಕ್ಕದ್ದು.

ಕ್ಯಾಂಪ್ ನಂಬರ್ 389.—ಮೆ|| ಅಬ್ದುಲ್‌ರಹಿಮ್ಮಾಯಷರು, ಬಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ಸಬ್ ಡಿವೀಜನಿನ ಚಾರ್ಜನ್ನು 1887ನೇ ಇಸವಿ ಮೇ 2ನೇ ಮರ್ಕುಮಿನ ಮಧ್ಯಾನ್ಹಾತ್ಪರ ಮೆ|| ಯಸ್. ಹೆಚ್. ಪಾಡರ್ಜಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 11ನೇ ಮೇ 1887.

ಕ್ಯಾಂಪ್ ನಂ. 372.—1887ನೇ ಇಸವಿ ಮಾರ್ಚಿ 17ನೇ ಮರ್ಕುಂ ಕ್ಯಾಂಪ್ ನಂ. 2,014ನೇ ಇಸ್ತಿಹಾರ್‌ನಾಮೆಯನ್ನು ಸನಿಸಿ, ಮೈಸೂರು ಡಿಸ್ಟ್ರಿಕ್ಟ್ ರೆವಿನ್ಯೂ ಪ್ರೊಮೋಷನರಾದ ಯಂ. ನಂಜರಾಜೇ ಅರಸಿನವರಿಗೆ ನಂಜುಂಡಪೊದಲಿಯಾರ್ರು ರಜಾದ ಮೇಲೆ ಯಿರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಮಳವಳ್ಳಿ ತಾಲ್ಲೂಕು 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತೆ.

ನಂ. 14.—ಮೆ|| ಜೆ. ಡಬ್ಲ್ಯಿಯು. ನೈಟ್‌ಯವರು, ಮೈಸೂರು ಡಿಸ್ಟ್ರಿಕ್ಟ್ ಯರಡನೇ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟ್ ಚಾರ್ಜನ್ನು ಮಾಹೆ ಮಜಕೂರ್ 4ನೇ ಮರ್ಕುಮಿನ ಮಧ್ಯಾನ್ಹಾತ್ಪರ ಮೆ|| ಹೆಚ್. ವಿ. ನಂಜುಡಯ್ಯನವರಿಗೆ ಒಪ್ಪಿಸಿರುತ್ತಾರೆ.

ನಂ. 15.—ಹುಣಸೂರು ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಕೆ. ಮಹಮ್ಮದ್ವಲ್ಲಿಸಾಬರಿಗೆ, 1887ನೇ ಇಸವಿ ಏಪ್ರಿಲ್ 15ನೇ ಮರ್ಕುಂ 3ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಹತ್ತು ದಿವಸಗಳ ಕ್ಯಾಜುವಲ್ ರಜಾ ಯನ್ನೂ ಯರಡು ದಿವಸಗಳ ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 12ನೇ ಮೇ 1887.

ಕ್ಯಾಂಪ್ ನಂ. 440.—ಅಮೃತಮಹಲ್ ಆಫೀಸರವರಿಗೆ ಅಸಿಸ್ಟೆಂಟರಾದ ಮೆ|| ಬಿ. ಗೋಪಾಲಯ್ಯಂಗಾರ್ರಿಗೆ 1887ನೇ ಇಸವಿ ಜೂನ್ 2ನೇ ಮರ್ಕುಂ ಲಾಗಾಯಿತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು 1 ತಿಂಗಳು 12 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 446.—ಫಾರೆಸ್ಟ್ ಪ್ರೊಮೋಷನರ್ ಮೆ|| ಮುದ್ದಪ್ಪನವರಿಗೆ 1885ನೇ ಇಸವಿ ಆಗಷ್ಟು 25ನೇ ಮರ್ಕುಂ 110ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ 20 ದಿವಸಗಳ ಪ್ರಿವಿಲೀಜ್ ರಜಾ ಅವರು ಉಪಯೋಗಿಸಿಕೊಳ್ಳದ ಸಬಬ್ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ಫಾರೆಸ್ಟ್ ಪ್ರೊಮೋಷನರ್ ಮೆ|| ಮುದ್ದಪ್ಪನವರಿಗೆ ಮಾಹೆಮಜಕೂರು 15ನೇ ತಾರೀಖು ಲಾಗಾಯಿತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು 21 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 14ನೇ ಮೇ 1887.

ಕ್ಯಾಂಪ್ ನಂ. 461.—ಪಾವಗಡತಾಲ್ಲೂಕು ಅಮಲ್ದಾರ್ ಸಿ. ಶಾಮಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು 2 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಶಿರಾ ತಾಲ್ಲೂಕು ಫಸ್ಟ್ ಕ್ಲಾಸ್ ಇನ್‌ಸ್ಪೆಕ್ಟರ್ ಮಹಮ್ಮದ್ ಜಾಫರ್‌ಯವರಿಗೆ ಶಾಮಯ್ಯಂಗಾರ್ರ ರಜಾಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಪಾವಗಡ ತಾಲ್ಲೂಕಿನ 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಆಕ್ಟಿಂಗ್‌ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತೆ.

ತಾರೀಖು 17ನೇ ಮೇ 1887.

ಕ್ಯಾಂಪ್ ನಂ. 507.—ತುಮಕೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಮೆ॥ ಪಿ. ಯ್. ಕೃಷ್ಣಮೂರ್ತಿಯವರು ಅವರು ಡಿಸ್ಟ್ರಿಕ್ಟ್ ಚಾರ್ಜ್ ಒಪ್ಪಿಸಿದ ತಾರೀಖು ಮೊದಲು 1 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. 1ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಬಿ. ಸಿ. ವೆಂಕಟವರದಯ್ಯಂಗಾರ್ರು ಮೆ॥ ಕೃಷ್ಣಮೂರ್ತಿಯವರ ಗೈರ ಹಾಜರಿಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ತುಮಕೂರು ಡಿಸ್ಟ್ರಿಕ್ಟಿನ 4ನೇ ಗ್ರೇಡ್ ಡೆಪ್ಯೂಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮೇಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತಾರೆ.—ಇವರು ಮೆ॥ ಆನಂದರಾಯರವರ ಮೈಸೂರು ಡಿಸ್ಟ್ರಿಕ್ಟ್ ಚಾರ್ಜ್ ತೆಗದುಕೊಂಡ ತರುವಾಯ ಮೊಕರರು ವುದ್ಯೋಗದ ಮೇಲೆ ಹೋಗತಕ್ಕದ್ದು.

ಕ್ಯಾಂಪ್ ನಂ. 430.—ಚನ್ನಗಿರಿ ತಾಲ್ಲೂಕು ಅಮಲ್ದಾರ್ ನರಸಿಂಗರಾಯರಿಗೆ ಅವರು ಉಪಯೋಗಿಸಿಕೊಂಡ ತಾರೀಖು ಲಾಗು ಯಿತು ಒಂದು ತಿಂಗಳು ಐದು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 20ನೇ ಮೇ 1887.

ನಂ. 17.—ಮೆ॥ ಜಿ. ಯಫ್. ಮೈಕಲ್ಜಾರ್ಯಯವರು ಕಡೂರು ಡಿಸ್ಟ್ರಿಕ್ಟ್ ವ ಟ್ರೆಜರಿ ಚಾರ್ಜನ್ನು 1887ನೇ ಇಸವಿ ಮೇ 14ನೇ ಮತ್ತು ಮಿನ ಮಧ್ಯಾನ್ಹಾತ್ಪರ ಕರ್ನಲ್ ಜೆ. ಯಿ. ಕ್ಯಾಂಪ್‌ಬೆಲ್ ಯವರಿಗೆ ಒಪ್ಪಿಸಿರುತ್ತಾರೆ.

ನಂ. 18.—ಮೆ॥ ಟಿ. ಆನಂದರಾವ್ ಬಿ. ಎ. ಯವರು ಹಾಸನದ ಡಿಸ್ಟ್ರಿಕ್ಟ್ ವ ಟ್ರೆಜರಿ ಚಾರ್ಜನ್ನು ಮೂಹೆ ಮಜಕೂರು 16ನೇ ಮತ್ತು ಮಿನ ಮಧ್ಯಾನ್ಹಾತ್ಪರ ಮೆ॥ ಕೆ. ರಾಮಚಂದ್ರರಾಯರಿಗೆ ಒಪ್ಪಿಸಿರುತ್ತಾರೆ.

ನಂ. 19.—ಮೆ॥ ಪಿ. ಯ್. ಪೂರ್ಣಯ್ಯನವರು ಹುಜೂರು ಟ್ರೆಜರಿ ಚಾರ್ಜನ್ನು 1887ನೇ ಇಸವಿ ಮೇ 9ನೇ ಮತ್ತು ಮಿನ ಮಧ್ಯಾನ್ಹಾತ್ಪರ ಮೆ॥ ಸಿ. ಮಾದಯ್ಯನವರಿಗೆ ಒಪ್ಪಿಸಿರುತ್ತಾರೆ.

ಹುಕ್ಕುಂ ಬಮೋಜೀಬ್,
ಆರ್. ವಿಜಯಿೀಂದ್ರರಾವ್,
ಚೀಫ್ ಸೆಕ್ರೆಟೇರಿ.